

**‘ಭಕ್ತ ನಿವಾಸ’ದ ಬಾವಿಯ ಪ್ರತಿಕೃತಿ. ಮೇಲಿನಿಂದ ನೋಡಿದರೆ ಹೀಗೆ ಕಾಣಿಸುತ್ತದೆ. ಚೌಕಾಕಾರದ್ದು ಒರತೆ ನೀರಿನ ಅಡಿಬಾವಿಯನ್ನು ಸಂಪರ್ಕಿಸಬಲ್ಲ ಮ್ಯಾನ್ ಹೋಲ್.**



**ಮಳೆನೀರಿನ ಮೇಲುಬಾವಿ ಪ್ರತ್ಯೇಕಿಸಲು ಸ್ಲ್ಯಾಬ್ ತಯಾರಿಯ ಮೊದಲು ಅದರ ಅಡಿಭಾಗದಲ್ಲಿ ಸಮಾಂತರವಾಗಿ ಸಿಕ್ಕಿಸಿರುವ ‘I’ ಸೆಕ್ಷನ್ ತೊಲೆಗಳು**



**ಉದಯ ಪೋಸ್ಕರ್ ಅವರ ಮನೆಯಂಗಳದ ಬಾವಿಯ ಪ್ರತಿಕೃತಿ. ಪಂಪಿನ ಸೆಕ್ಷನ್ ಪೈಪ್ ಇಳಿಸಲು ಕೊಳವೆಬಾವಿಯ ಕೇಸಿಂಗ್ ಪೈಪ್ ಜೋಡಣೆ.**

ಎಚ್ಚರ, ಒಟ್ಟೂ ನಿರ್ಮಾಣ ಯೋಜನೆಯ ಡ್ರಾಯಿಂಗ್ ಮಾಡಿಕೊಟ್ಟವರು ಅವರೇ.

‘ನಮ್ಮ ಇಷ್ಟೂ ಕುಟುಂಬಗಳಿಗೆ ಈ ಬಾವಿಯ ಈ ಥರದ ನವೀಕರಣದಿಂದ ಆದ ಪ್ರಯೋಜನ ಅಷ್ಟಿಷ್ಟಲ್ಲ’, ಈ ಕೃಷಿಭೂಮಿಯ ಒಡೆಯ ಉದಯ ಪೋಸ್ಕರ್ ನೆನೆಯುತ್ತಾರೆ, ‘ಈಗಲೂ ನಾವಿದನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದ್ದೇವೆ.’

‘ಈಗ ಇರುವ ವ್ಯವಸ್ಥೆಯಲ್ಲಿ ನಮಗೆ ಇನ್ನೂ ಒಂದು ನೀರಕೊರತೆ ಪರಿಹರಿಸುವ ಆಯ್ಕೆಯಿದೆ’ ಎನ್ನುವ ಗೋಪಾಲಕೃಷ್ಣ ಗೋಖಲೆ ತಮ್ಮ ಯೋಜನೆಯನ್ನು ವಿವರಿಸುತ್ತಾರೆ: ‘ಮಳೆಗಾಲದಲ್ಲಿ ತಳ ಬಾವಿಯಲ್ಲಿ ಬೇಕಾದಷ್ಟು ನೀರಿರುತ್ತದೆ ತಾನೇ? ಆಗ ಅದರಿಂದ ಪಂಪ್ ಮಾಡಿ ಮೇಲುಬಾವಿಯಲ್ಲಿ ತುಂಬಿ ಇಟ್ಟುಕೊಳ್ಳಬಹುದು. ಆದರೆ ಈ ಥರ ಮಾಡಿಕೊಳ್ಳುವುದು ಬೇಕಾಗಲೇ ಇಲ್ಲ.’

ವೆಲ್ನೇಶ್ವರ್ ಮಹಾರಾಷ್ಟ್ರದ ಕೊಂಕಣ್ ಭಾಗದಲ್ಲಿ ಬರುತ್ತದೆ. ಇಡೀ ಕೊಂಕಣದಲ್ಲಿ ಹಲವೆಡೆಯ ಬಾವಿಗಳಲ್ಲಿ ಇದೇ ಥರದ ನೀರಿನ ಕೊರತೆಯಿದೆ. ಹದಿನೈದು ವರ್ಷಗಳ ಹಿಂದೆ ನಿರ್ಮಿಸಿದ ಈ ಎರಡೂ ‘ಎರಡಲ್ಲೊಂದು ಬಾವಿ’ಗಳು ಕೊಂಕಣ್ ಅಥವಾ ಮಹಾರಾಷ್ಟ್ರದಲ್ಲಿ ಮಾತ್ರವಲ್ಲ, ಬಹುಶಃ ದೇಶದಲ್ಲೇ ಅನನ್ಯ. ಆದರೆ ಅಂದಿನಿಂದ ಇಂದಿನ ತನಕ ಈ ಥರದ ಬೇರೆ ಬಾವಿಗಳ ನಿರ್ಮಾಣ ಆದಂತಿಲ್ಲ.

ಜಂಬಿಟ್ಟಿಗೆ (ಮುರಕಲ್ಲು, ಲ್ಯಾಟರೈಟ್) ಮಣ್ಣು ಇರುವ ಪ್ರದೇಶಗಳಿಗೆ ಈ ರಚನೆ ಸೂಕ್ತ. ಈ ಬಾವಿಯ ಹೆಚ್ಚುಗಾರಿಕೆ ಅಥವಾ ಪ್ರಯೋಜನ ಇರುವುದು ಅದು ಬಾವಿಯ ಮೇಲ್ಭಾಗದ, ಬಳಸದೆ ಉಳಿಯುವ ಭಾಗವನ್ನು ಉಪಯೋಗಪ್ರದವಾಗಿಸುತ್ತದೆ ಎನ್ನುವುದರಲ್ಲಿ.

‘ಈ ಬಾವಿಯ ನಿರ್ಮಾಣ ವೆಚ್ಚವೇ ಬಹುಶಃ ಇದರ ಜನಪ್ರಿಯತೆಗೆ ಅಡ್ಡಿ’ ಎನ್ನುತ್ತಾರೆ ಪ್ರೊ. ಚಂದ್ರಶೇಖರ್ ಗಾಡ್ಗಿಲ್. ‘ಕೊಂಕಣದ ಬಹುಮಂದಿಯ ಮನಃಸ್ಥಿತಿಯೂ ಇದಕ್ಕೆ ಕಾರಣ ಇರಬಹುದು’, ಅವರು ಮುಂದುವರಿಸುತ್ತಾರೆ – ‘ಹೆಚ್ಚಿನ ಕೃಷಿಕರೂ ಮೊದಲ ಹಂಗಾಮಿನ ಬೆಳೆಯನ್ನು ಮಾತ್ರ ನೆಚ್ಚಿಕೊಳ್ಳುತ್ತಾರೆ. ಎರಡನೆಯ ಹಂಗಾಮಿನಲ್ಲಿ ಧಾನ್ಯಗಳನ್ನು ಬೆಳೆಯುವ ಅಭ್ಯಾಸ ಹಿಂದೆ ಇತ್ತು, ಈಗ ಅದೂ ಕಣ್ಮರೆಯಾಗಿದೆ. ನಮ್ಮಲ್ಲಿ ನೀರು ಧಾರಾಳ ಇದೆ, ಮತ್ತೇಕೆ ಅದಕ್ಕಾಗಿ ಹೆಚ್ಚು ವೆಚ್ಚ ಮಾಡಬೇಕು ಎನ್ನುವ ಮನೋಭಾವ ಹಲವರಲ್ಲಿದೆ.’

## ಇತಿಮಿತಿಗಳು

‘ಈ ‘ಎರಡರಲ್ಲೊಂದು’ ಬಾವಿಯ ಪರಿಕಲ್ಪನೆಗೆ ಅದರದ್ದೇ ಆದ ಮಿತಿಗಳಿವೆ. ಅದರ ತಾಂತ್ರಿಕ ವಿನ್ಯಾಸದಿಂದ ಆರಂಭಿಸಿ ಸ್ಲ್ಯಾಬ್ ಯಾವ ಥರ ಬೇಕು, ಅದು ಎಷ್ಟು ದೃಢತೆಯಿಂದ ಕೂಡಿರಬೇಕು ಎನ್ನುವುದನ್ನು ಒಬ್ಬ ತಜ್ಞ ಎಂಜಿನಿಯರ್ ಅಷ್ಟೇ ಹೇಳಬಲ್ಲ. ಶ್ರೀಸಾಮಾನ್ಯನೊಬ್ಬ ಇದನ್ನು ತಾನೇ ಮಾಡಿಕೊಳ್ಳಲು ಶಕ್ಯವಿಲ್ಲ. ಇದರ ಸ್ಲ್ಯಾಬ್ ಅದರ ಮೇಲೆ ನಿಲ್ಲುವ ನೀರಿನ ಅಷ್ಟೂ ಭಾರವನ್ನು ತಾಳಿಕೊಳ್ಳಬೇಕಿದೆ. ಹೀಗೆ ಮಾಡುವಾಗ ಆ ರಚನೆ ಹೆಚ್ಚು ವೆಚ್ಚದ್ದಾಗುತ್ತದೆ’ ಎನ್ನುತ್ತಾರೆ ರವೀಂದ್ರ ಆರ್. ನೇನೆ.

ಅದು ಸರಿಯೇ. ಆದರೆ ಸ್ಥಳದ ಕೊರತೆಯಿರುವ ಜಂಬಿಟ್ಟಿಗೆ ಪ್ರದೇಶದಲ್ಲಿ, ಸ್ವತಃ ಎಂಜಿನಿಯರ್ ಆಗಿರುವ ಮನೆ ಮಾಲಿಕರು ಇದ್ದಲ್ಲಿ ಈ ರಚನೆಯನ್ನು ಪರಿಗಣಿಸಬಹುದು. ಕೊಂಕಣದ ಈ ಹರಿಕಾರರೊಡನೆ ಒಮ್ಮೆ ಸಮಾಲೋಚನೆ ಮಾಡಿಕೊಂಡರೆ, ಇಂಥವರು ಕಷ್ಟವಿಲ್ಲದೆ ತಮ್ಮಲ್ಲೂ ‘ಟು ಇನ್ ವನ್’ ಬಾವಿ ಮಾಡಿಕೊಳ್ಳಲು ಸಾಧ್ಯ.

ಈಗ ನಮ್ಮೆದುರು ಮಳೆನೀರಿಂಗಿಸುವ ಜ್ಞಾನವಿದೆ. ಇದು, ಕೊಂಕಣದ ಈ ಬಾವಿಗಳ ನೀರ ಕೊರತೆಯ ಪರಿಹಾರಕ್ಕೆ ಇನ್ನೂ ಕಡಿಮೆ ವೆಚ್ಚದ ಪರಿಹಾರ ಆಗಬಹುದಿತ್ತೇನೋ. ಚಾವಣಿಯ ನೀರಿರುವ ‘ಭಕ್ತ ನಿವಾಸ’ದಲ್ಲಿ ಅದನ್ನೇ ಶುಚಿಯಾಗಿಟ್ಟು, ಶೋಧಿಸಿ ಬಾವಿಯೊಳಕ್ಕೆ ಇಳಿಸಬಹುದಿತ್ತು. ಇಲ್ಲಿ ಲಭ್ಯವಿರುವ ಮಳೆನೀರು ಬಾವಿಯ ಜಲಮಟ್ಟ ಏರಿಸಿ ಅಭಾವ ಪರಿಹರಿಸುವ ಸಾಧ್ಯತೆ ಇತ್ತು. ಉದಯ ಪೋಸ್ಕರ್ ಅವರ ಬಾವಿಯ ಬಳಿ ಕಟ್ಟಡ ಇಲ್ಲ. ಆದರೆ ಆ ಬಾವಿಯ ಜಲವೃಷ್ಟಿ ಪ್ರದೇಶದಲ್ಲಿ ನಾಲ್ಕಾರು ಇಂಗುಗುಂಡಿ ರಚಿಸಿಕೊಟ್ಟಿದ್ದರೆ ಅವೂ ಪ್ರಯೋಜನ ಕೊಡುತ್ತಿದ್ದುವು ಅನಿಸುತ್ತದೆ.

ಮೇಲಿನ ಅಭಿಪ್ರಾಯಗಳನ್ನು ನಮಗೆ ಈಗ ಹೇಳಲು ಸುಲಭವಾಗುತ್ತದೆ. ಏಕೆಂದರೆ, ಈಗ ಮಳೆಕೊಯ್ಲು ಹೆಚ್ಚು ಜನಪ್ರಿಯವಾಗಹತ್ತಿದೆ. ಬಹುಜನರಿಗೆ ಇದನ್ನು ಮಾಡುವ ಮೂಲಭೂತ ಮಾರ್ಗದ ಪರಿಚಯವಿದೆ.

ಆದರೆ ನಾವು ಮರೆಯಬಾರದು, ಅಷ್ಟು ಹಿಂದಿನ ಕಾಲದಲ್ಲಿ ಮಳೆಕೊಯ್ಲಿನ ಬಗ್ಗೆ ಹೆಚ್ಚು ಮಂದಿಗೆ ಅರಿವಿರಲಿಲ್ಲ. ಹೇಗೆ ಮಾಡಬಹುದೆಂಬ ಕಲ್ಪನೆ ಜನಸಾಮಾನ್ಯರವರೆಗೆ ತಲುಪಿಯೂ ಇರಲಿಲ್ಲ.

ಭವಿಷ್ಯದಲ್ಲಿ ಈ ಥರದ ಬಾವಿ ಮಾಡಲು ಯಾರೂ ಮುಂದೆ ಬಾರದಿದ್ದರೆ ಇವೆರಡೂ ದೇಶದ ವಿಶಿಷ್ಟ ಬಾವಿಗಳಾಗಿ ಸದ್ದಿಲ್ಲದೆ ಚರಿತ್ರೆ ಸೇರಬಹುದು. ಅದೇನೇ ಇದ್ದರೂ ಮೊತ್ತಮೊದಲ ಬಾರಿಗೆ ಈ ಉಪಯೋಗೀ ರಚನೆಗಾಗಿ ಶ್ರಮ ವಹಿಸಿ, ರಿಸ್ಕ್ ತೆಗೆದುಕೊಂಡು ಇದನ್ನು ನಿರ್ಮಿಸಿದವರನ್ನು ನಾವೆಲ್ಲರೂ ನೆನೆಯಲೇಬೇಕು. ಪ್ರೊ. ಚಂದ್ರಶೇಖರ್ ಗಾಡ್ಗಿಲ್ ಮತ್ತು ರವೀಂದ್ರ ನೆನೆಯವರ ಈ ಜನಪರ ಕಾಳಜಿ ಶ್ಲಾಘನೀಯ.

ಸಂಪರ್ಕ: ಗೋಪಾಲಕೃಷ್ಣ ಗೋಖಲೆ (ಹಿಂದಿ, ಇಂಗ್ಲಿಷ್) – 83084 96358.

ಚಿತ್ರಗಳು: ಗೋಪಾಲಕೃಷ್ಣ ಗೋಖಲೆ